# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 08.11.2011**

## *ಬಡಾವಣೆ ನಾಮಕರಣ : ಸಾರ್ವಜನಿಕ ಆಕ್ಷೇಪಣೆಗೆ ಆಹ್ವಾನ*

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಾಸರಹಳ್ಳಿ ವಲಯದ ವಾರ್ಡ್ ನಂ.6ಕ್ಕೆ ಸೇರಿದ ಈ ಕೆಳಕಂಡ ಚೆಕ್ಕುಬಂದಿಯ ಪ್ರದೇಶಕ್ಕೆ ***"ಕಾವೇರಿ ಬಡಾವಣೆ"*** ಎಂದು ನಾಮಕರಣ ಮಾಡಲು ಆಯುಕ್ತರವರು ಸೂಕ್ತ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಗಿದೆ.

1. ಜಗದಾಂಬ ಇಂಜಿನಿಯರಿಂಗ್ ವರ್ಕ್ಸ್‌ನಿಂದ ಆರಂಭವಾಗಿ ಮುನಿಸ್ವಾಮಪ್ಪ ಕಾಂಪ್ಲೆಕ್ಸ್‌ವರೆಗೆ ವಾರ್ಡ್ ಸಂಖ್ಯೆ: 6ರ ದಾಸರಹಳ್ಳಿ ಗ್ರಾಮದ ಮುಖ್ಯರಸ್ತೆಯಾದ ನಾಡಪ್ರಭು ಕೆಂಪೇಗೌಡ ರಸ್ತೆ (ಜಕ್ಕೂರಿನಿಂದ ಹೊರವರ್ತುಲ ರಸ್ತೆ – ಹೆಬ್ಬಾಳಕ್ಕೆ ಸೇರುವ ರಸ್ತೆ)ಯ ಪಶ್ಚಿಮ ಭಾಗ.
2. ಮರಿಯಣ್ಣಪಾಳ್ಯದಿಂದ ಕಾಫಿ ಬೋರ್ಡ್ ಬಡಾವಣೆಗೆ ಹೋಗುವ ರಸ್ತೆಯ ಉತ್ತರ ಭಾಗದ ವಲಯ.
3. ಸೇಂಟ್ ಜಾನ್ಸ್ ಶಾಲೆಯಿಂದ ಭುವನೇಶ್ವರಿನಗರಕ್ಕೆ ಹೋಗುವ ರಸ್ತೆಯ ಪೂರ್ವ ಭಾಗದ ವಲಯ.
4. ಮುನಿಕೆಂಪಣ್ಣ ಬಡಾವಣೆಯ ದಕ್ಷಿಣಕ್ಕಿರುವ ವಲಯ.

ಆದುದರಿಂದ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಆಕ್ಷೇಪಣೆಗಳಿದ್ದಲ್ಲಿ ಈ ಪತ್ರಿಕಾ ಪ್ರಕಟಣೆ ಹೊರಡಿಸಲಾದ ದಿನಾಂಕದಿಂದ 30 ದಿನದೊಳಗೆ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ನರಸಿಂಹರಾಜ ಚೌಕ, ಬೆಂಗಳೂರು-02, ಇವರಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ತಿಳಿಸಲಾಗಿದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**